**ಕರ್ನಾಟಕ ಸರ್ಕಾರ**
**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ಬಿಟಿಇ/05/ಇಸಿಎಸ್ (3)/2017

ಕಾರ್ಯದರ್ಶಿಯವರ ಕಛೇರಿ
ತಾಂತ್ರಿಕ ಪರೀಕ್ಷಾ ಮಂಡಳಿ
ಅರಮನೆ ರಸ್ತೆ, ಬೆಂಗಳೂರು-01
ದಿನಾಂಕ: 07.08.2018.

**ಸುತ್ತೋಲೆ**

ವಿಷಯ : ಸಿ-15 ಪಠ್ಯಕ್ರಮದ ಅಂಕಪಟ್ಟಿಗಳನ್ನು ಮುದ್ರಿಸಿ ಪಾಲಿಟೆಕ್ನಿಕ್‌ಗಳಿಗೆ ಕಳುಹಿಸುವ ಬಗ್ಗೆ.

*-*-*-*-*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2015-16 ನೇ ಸಾಲಿನಿಂದ 01 & 02 ನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳಿಗೆ, 2016-17 ನೇ ಸಾಲಿನಿಂದ 03 & 04 ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಮತ್ತು 2017-18 ನೇ ಸಾಲಿನಿಂದ 05 & 06 ನೇ ಸೆಮಿಸ್ಟರ್ ವಿದ್ಯಾರ್ಥಿಗಳಿಗೆ ಸಿ-15 "ಫಲಿತಾಂಶದ ಆಧಾರಿತ ಪಠ್ಯಕ್ರಮ"ದಡಿ ನಿಗದಿ ಪಡಿಸಿರುವ ಪಠ್ಯವಿಷಯಗಳನ್ನು ಬೋಧಿಸಲಾಗುತ್ತಿದೆ.

ಸಿ-15 ಪಠ್ಯಕ್ರಮದಲ್ಲಿ ಈಗಾಗಲೇ 01 ರಿಂದ 06 ನೇ ಸೆಮಿಸ್ಟರ್‌ವರೆಗೆ ಪರೀಕ್ಷೆಗಳನ್ನು ನಡೆಸಿ ಫಲಿತಾಂಶ ಪ್ರಕಟಿಸಲಾಗಿದೆ.

ಸಿ-15 ಪಠ್ಯಕ್ರಮವನ್ನು ಅಳವಡಿಸಿಕೊಂಡಿರುವುದರಿಂದ ಹೊಸ ನಮೂನೆಯ ಡಿಪ್ಲೊಮಾ ಅಂಕಪಟ್ಟಿಗಳ ಮುದ್ರಣ ಮತ್ತು ವಿತರಣೆಯನ್ನು ಮಾಡಲು ಕ್ರಮಕೈಗೊಳ್ಳಲಾಗಿದೆ.

ಪ್ರಾಚಾರ್ಯರು ವಿದ್ಯಾರ್ಥಿಗಳಿಗೆ ಅಂಕಪಟ್ಟಿಗಳನ್ನು ವಿತರಣೆ ಮಾಡುವಾಗ ಈ ಕೆಳಕಂಡ ಅಂಶಗಳನ್ನು ಪರಿಗಣಿಸಬೇಕಾಗಿರುತ್ತದೆ.

1. ಪಾಲಿಟೆಕ್ನಿಕ್‌ಗಳಿಗೆ ಪೂರೈಕೆಯಾಗುವ ಅಂಕಪಟ್ಟಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಎಲ್ಲಾ ಮಾಹಿತಿಗಳು ಸರಿಯಾಗಿರುವುದರ ಬಗ್ಗೆ ವಿಭಾಗ ಮುಖ್ಯಸ್ಥರು/ಹಿರಿಯ ಉಪನ್ಯಾಸಕರು ದೃಢೀಕರಣ ನೀಡುವುದು ನಂತರ ಅದನ್ನು ಪ್ರಾಚಾರ್ಯರು ಮೇಲು ಸಹಿ ಮಾಡತಕ್ಕದ್ದು.
2. ಅಂಕಪಟ್ಟಿಗಳನ್ನು ವಿತರಣೆ ಮಾಡುವಾಗ ಅಂಕಪಟ್ಟಿಗಳಲ್ಲಿ ಮುದ್ರಿತವಾಗಿರುವ ಎಲ್ಲಾ ಮಾಹಿತಿಗಳು ಸರಿಯಾಗಿರುವುದಾಗಿ ಪರಿಶೀಲಿಸಲಾಗಿದೆ ಎಂದು ವಿದ್ಯಾರ್ಥಿಗಳಿಂದ ಮುಚ್ಚಳಿಕೆ ಪತ್ರವನ್ನು ಪಡೆಯುವುದು.
3. ಅಂಕಪಟ್ಟಿಗಳನ್ನು ವಿತರಣೆ ಮಾಡಲು ರಿಜಿಸ್ಟರ್ ಅನ್ನು ನಿರ್ವಹಿಸತಕ್ಕದ್ದು. (ರಿಜಿಸ್ಟರ್ ಆರ್.ಆರ್ ಸಂಖ್ಯೆಯನ್ನು ಹೊಂದಿರಬೇಕು ಮತ್ತು ರಿಜಿಸ್ಟರ್‌ನಲ್ಲಿ SI.NO, REGISTER NO, NAME, SEM, EXAM YEAR, MARKS CARD NUMBER, ISSUE DATE, STUDENT SIGNATURE, STAFF SIGNATURE ಕಡ್ಡಾಯವಾಗಿ ನಮೂದಿಸತಕ್ಕದ್ದು) ಹಾಗೂ MARKS CARD NUMBER ಅನ್ನು BTE Linx ನಲ್ಲಿ ಕಡ್ಡಾಯವಾಗಿ ನಮೂದಿಸುವುದು.
4. ಅಂಕಪಟ್ಟಿಗಳನ್ನು ವಿತರಣೆ ಮಾಡಿದ ರಿಜಿಸ್ಟರ್‌ನ ಪ್ರತಿ ಪುಟದ ಕೊನೆಯಲ್ಲಿ ಪ್ರಾಚಾರ್ಯರು ದೃಢೀಕರಿಸಿ ಸಹಿ ಮಾಡುವುದು.

ಕಾರ್ಯದರ್ಶಿ
ತಾಂತ್ರಿಕ ಪರೀಕ್ಷಾ ಮಂಡಳಿ

ಇವರಿಗೆ:

1. ರಾಜ್ಯದ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ – ಸೂಕ್ತ ಕ್ರಮಕ್ಕಾಗಿ.
2. ಇ-ಆಡಳಿತ-ವೆಬ್‌ಸೈಟ್‌ನಲ್ಲಿ ಪ್ರಕಟಿಸಲು